
# ಪ್ರಾಣಪಕ್ಷಿಯ ರೆಕ್ಕೆ




ಬೆತ್ತಲೆ ಬೆನ್ನಮೇಲೆ ನೀನು
ಬೆರಳಲ್ಲಿ ಬರೆದ ಚಿತ್ರ
ಯಾವುದೋ ವಿಚಿತ್ರದಲಿ
ಜೀವ ತಳೆದಿದೆ.
ಬೆನ್ನ ತಗ್ಗಿನಗುಂಟ ಹರಿದ
ಹೆಸರಿಲ್ಲದ ನದಿಯಲ್ಲಿ
ಜೀವ ಈಸುಬಿದ್ದಿದೆ.

ಆಳ ಸುಳಿಗಳ ಒಳಗೆ
ಇಳಿದಿಳಿದು ಅಳಿಯುವ ಮಾಯೆ
ನದಿಯ ನಡುವಿನಲಿ
ಪತರಗುಟ್ಟುವ ತೆಪ್ಪ
ಜೀವ ಅಂಗೈಲಿಟ್ಟು ನಿನ್ನ ಸೇರುವೆ
ತೀರದಂಥ ತೀರ ನೀನು
ತಿರುತಿರುಗಿ ನಿನ್ನಲ್ಲೇ
ಇರುವ ಗೂಢಗಳಲ್ಲಿ
ಚಿತ್ತನೆಟ್ಟು ಚಕಿತಗೊಳ್ಳುವೆ.

ನೀನೆಂಬ ಕಡಲೊಳಗೆ ನನ್ನ
ರೂಹು ಅಳಿಯುವ ಅರಿವಲ್ಲೂ
ನನ್ನೊಳಗಿನ ನಾದ ಕಾಪಿಟ್ಟ
ನದಿ ನಾನು.
ಬಚ್ಚಿಟ್ಟುಕೊ ಒಡಲೊಳಗೆ
ಯಾರೂ ಊಹಿಸದ ದಿವ್ಯ
ಏಕಾಂತದಲಿ
ಜೀವ ಪಡೆಯುತಲಿರುವೆ ಮತ್ತೆ ಮತ್ತೆ.
ಎವೆ ಮುಚ್ಚಿಕೊ ಹಾಗೆ
ನಿನ್ನೆದೆಯೊಳಗೆ ಕಲಕಲಹರಿವ ನನ್ನಹಾಡು
ಹರಿಯಬಾರದು ಹೊರಗೆ.

ಕಾವುಕೊಡು...
ನಿನ್ನ ನೀನೇ ಉಣಿಸು
ರೆಕ್ಕೆಮೊಳೆತ ಅದಮ್ಯ ಉನ್ಮಾದದಲಿ
ಹಾರಿಹೋಗುವೆ ಒಮ್ಮೆ ದಿಗಂತದಾಚೆ.
ಅನಂತದಲಿ ಕಾಯುವೆ ನಿನ್ನ
ಓ ನನ್ನ ಪ್ರಾಣಪಕ್ಷಿಯಂಥವನೇ
ಆಕಾಶದ ಚಿತ್ರಬರೆ ಈಗ
ಎದೆಯಮೇಲೆ.

● ಗೀತಾ ವಸಂತ